ವಿಚಾರ ಯಾವ ಭಾಷೆಯಲ್ಲಿ ಹೇಳಿದ್ರೂ ಅದು ಹಲ್ಕಾನೇ. ನಿಮಗೆ ಇನ್ನೊಂದು ವಿಚಾರ ಗೊತ್ತುಂಟಾ? ಆತ ಯಾವುದೋ ಹುಡುಗಿಯನ್ನೋ ಹೆಂಗಸನ್ನೋ ಇಟ್ಟುಕೊಂಡಿದ್ದಾನಲ್ಲಾ, ಅವಳೇನು ಒಬ್ಬಳೇ ಟ್ರೆಕ್ಕಿಂಗ್ ಹೋಗುವುದು? ಅಥವಾ ಯಾರ ಯಾರ ಸಂಗಡವೋ ರಾತ್ರಿ–ಹಗಲು ಇರ್ತಾಳೆಂದ್ರೆ ಅದೆಂತಾ ಹೆಣ್ಣಿರಬೇಕು ನೀವೇ ಹೇಳಿ', 'ಹಾಗಲ್ಲವೇ, ಹೆಣ್ಣು ಮಕ್ಕಳಷ್ಟೇ ಟ್ರೆಕ್ಕಿಂಗ್ ಹೋಗಬಾರ್ದು ಅಂತೇನಾರ್ದು ರೂಲ್ಸ್ ಉಂಟಾ?' ಅಂತ ನಾನು ವಾದ ಮಾಡಿದಾಗ 'ನಿಮ್ಮ ಗಂಡಸರ ಬುದ್ಧಿನೇ ಇಷ್ಟು, ನೋಡಿ. ನಾನು ನಿಮಗೆ ರಿಪೀಟ್ ಆಗಿ ಹೇಳ್ತೇನೆ. ನೀವು ಅವರ ಸಾವಾಸ ಬಿಟ್ಟು ಬಿಡಿ. ಒಂಥರಾ ಹುಚ್ಚು ಅದು. ಅದರ ಸಂಗಡ ಸೇರಿ ಪ್ರತಿಷ್ಠಿತ ಬ್ಯಾಂಕ್ ಒಂದರ ಮ್ಯಾನೇಜರ್ ಅಂತ ಅನ್ನಿಸಿಕೊಂಡ ನೀವೂ ಹಗುರವಾಗಬೇಡಿ, ಇನ್ನು ನಿಮ್ಮಿಷ್ಟ' ಅಂತ ಹೇಳಿ ಧಡಧಡನೆ ಎದ್ದು ಅಡುಗೆಮನೆಯತ್ತ ಧಾವಿಸಿದಳು.

★★★

ಅಂದು ರಾತ್ರಿ ಟೀವಿಯಲ್ಲಿ ಪ್ರಧಾನಿಯವರ 'ಮನ್ ಕಿ ಬಾತ್' ಆಲಿಸುತ್ತಿದ್ದೆ. ಮೊಬೈಲ್ ಸದ್ದು ಮಾಡಿತು. 'ಹಲೋ' ಅಂದೆ. ಸೀತಣ್ಣನದೇ ಫೋನ್. 'ನಾಳೆ ರವಿವಾರ ಬೆಳಿಗ್ಗೆ ಹತ್ತು ಗಂಟೆಗೆ ಟೌನ್‌ಹಾಲಿನಲ್ಲಿ ರಾಮಚಂದ್ರ ಅವರ ಭಾಷಣವುಂಟು. ಹೋಗುವುದಾ? ಆದ್ರೆ ನಂಗೆ ಒಬ್ಬನೇ ಹೋಗಲಿಕ್ಕೆ ಉದಾಸೀನ ಮಾರಾಯ್ರೆ. ನೀವು ಕಂಪನಿ ಕೊಡ್ತೆ ಅಂದ್ರೆ ಆದೀತು. ಮತ್ತೆ ಮಧ್ಯಾಹ್ನಕ್ಕೆ ನಮ್ಮಲ್ಲೇ ಲಂಚ್. ನಿಮ್ಮ ಮಿಸೆಸ್ ಬರ್‍ತ್ತಾರಾ ಕೇಳಿ ನೋಡಿ, ತಿಳಿಸಿ' ಕರೆ ಸ್ತಬ್ಧ. ನಾನು ನೇಹಾಳನ್ನು ವಿಚಾರಿಸಿದೆ. 'ಅಯ್ಯೋ, ಲೆಕ್ಚರ್ ಅಂದ್ರೆ ನಂಗೆ ಮಹಾ ಬೋರ್. ಅದನ್ನು ಕೇಳಿ ಯಾರೂ ಉದ್ಧಾರ ಆದೋರಿಲ್ಲ ಬಿಡಿ. ಅದರ ಬದಲು ನಾನು ಕೆ.ಆರ್. ಪುರಕ್ಕೆ ಸುಗುಣಳ ಮನೆಗೆ ಹೋಗಿ ಬರ್ತೆ. ಆದೀತಾ?' ಅಂತ ವಿಚಾರಿಸಿ ಆಗಲೇ ಹೋಗುವ ತಯಾರಿ ನಡೆಸ ತೊಡಗಿದಳು. ನಾನು ಸೀತಣ್ಣನಿಗೆ ವಿಷಯ ತಿಳಿಸಿದೆ.

ಮರುದಿನ ಬೆಳಿಗ್ಗೆ ಎದ್ದು ನಿತ್ಯಕರ್ಮ ಪೂರೈಸಿ ಸ್ನಾನ, ದೇವರ ಪೂಜೆ ಮುಗಿಸಿ, ಟಿಫಿನ್ ಮಾಡಿ ನೇಹಾಳಿಗೆ ಬೈ ಹೇಳಿ ಕಾರಿನಲ್ಲಿ ಹೊರಡಲನುವಾದೆ. ಮತ್ತೆ ಮೊಬೈಲ್ ರಿಂಗಣಿಸಿತು. 'ನೇಹಾ' ಅಂದೆ. ಒಳಗೆ ಮೇಕಪ್ಪಿನಲ್ಲಿ ಬೀಜಿಯಾಗಿದ್ದವಳು, 'ಏನು ಮತ್ತೆ?' ಅಂತ ಕೂಗಿದಳು ಕೊಂಚ ಅಸಹನೆಯಿಂದ. 'ನಿನ್ನ ಚಿಕ್ಕಪ್ಪ ರಾಮಮೂರ್ತಿ ಇದ್ದಾರಲ್ಲ, ನಮ್ಮ ಮನೆಗೆ ಇದೀಗ ಬರುವವರಿದ್ದಾರಂತೆ ಪ್ರಸ್ತುತ ಮೆಜೆಸ್ಟಿಕ್‌ನಲ್ಲಿದ್ದಾರೆ. ಎರಡು ದಿನ ನಮ್ಮಲ್ಲೇ ವಾಸ್ತವ್ಯ ಅಂತ ಹೇಳಿದ್ರು' ಎಂದು ಮುಗುಳ್ನಕ್ಕೆ. ಹೊರಬಂದ ನೇಹಾಳಿಗೆ ಉರಿ ಕಿತ್ತೆದ್ದು ಬಂತು. 'ನನ್ನ ಕರ್ಮ. ಇವತ್ತಾದ್ರೂ ಅಡುಗೆ ತಪ್ಪಿತು ಅಂದ್ಕೊಂಡಿದ್ದೆ' ಅಂತೆಲ್ಲ ಧುಮುಗುಟ್ಟಿದಳು. 'ಎಷ್ಟಂದ್ರೂ ನಿನ್ನ ಪ್ರೀತಿಯ ಚಿಕ್ಕಪ್ಪ ಅಲ್ವೇನೇ?' ಅಂತ ನಾನು ಒಂದಿಷ್ಟು ಒಗ್ಗರಣೆ ಹಾಕಿದೆ. 'ಸುಮ್ನೇ ಹೋಗ್ರೀ ನೀವು' ಅಂತ ಹುಸಿಕೋಪ ಹೊರಹಾಕಿ, ಮರುಕ್ಷಣದಲ್ಲಿಯೇ ಕಣ್ಣು ಮಿಟುಕಿಸಿ ನಕ್ಕು 'ಬೇಗ ಬನ್ನಿ ಆಯ್ತಾ? ಚಿಕ್ಕಪ್ಪ, ನಿಮಗಾಗಿ ಕಾದಿರ್ತಾರೆ' ಅಂತ ತಿರುಗುಬಾಣ ಬಿಟ್ಟಳು.

ಹತ್ತು ಗಂಟೆಗೆ ಸರಿಯಾಗಿ ಹನುಮಂತ ನಗರದಲ್ಲಿರುವ ಸೀತಣ್ಣನ ಮನೆಯಲ್ಲಿದ್ದೆ. ಎಂದಿನಂತೆ ಫಿಲ್ಟರ್ ಕಾಫಿ ಕೈಗೆ ಬಂತು. 'ನಿಮ್ಮ ಕಾರನ್ನ ಇಲ್ಲೇ ಬಿಡಿ, ನನ್ನ ಕಾರಿನಲ್ಲಿ ಹೋಗುವಾ. ಬರುವಾಗ ಅದಕ್ಕೆ ಸ್ವಲ್ಪ ರಿಪೇರಿಯುಂಟು' ಅಂದರು ಸೀತಣ್ಣ. ಡ್ರೈವಿಂಗ್‌ನಲ್ಲಿ ಅವರದು ಎತ್ತಿದ ಕೈ. ರವಿವಾರವಾದದ್ದರಿಂದ ಅಷ್ಟೊಂದು ಟ್ರಾಫಿಕ್ ಇರಲಿಲ್ಲ. ಆದರೆ ಕಾರು ಟೌನ್‌ಹಾಲ್ ದಾಟಿ ಮೆಜೆಸ್ಟಿಕ್ ಕಡೆ ಓಡುತ್ತಿತ್ತು. 'ಎಲ್ಲಿಗೆ ಹೋಯ್ತಾ ಇದ್ರೀ ಮಾರಾಯ್ರೇ? ಟೌನ್‌ಹಾಲ್ ದಾಟಿ ಹೋಯ್ತಲ್ಲ' ಅಂದೆ. ಸೀತಣ್ಣ ಮುಸಿ ಮುಸಿ ನಗುತ್ತ ಹೇಳಿದ್ರು– 'ರಾಮಚಂದ್ರರೂ ಇಲ್ಲ,